ಕಾಫಿ ಹೌಸ್‌ಗೆ ಬಂದು ಕೂತ. ಅಲ್ಲಿರುವಾಗಲೇ ಅರುಂಧತಿಯ ಫೋನ್ ಬಂತು. ಬೆಳಗಿನಿಂದ ಒಬ್ಬಳೇ ಇದ್ದು ಬೋರ್ ಆಗಿದೆ. ರಾತ್ರಿ ಡಿನ್ನರ್ ಹೋಗೋಣವಾ ಎಂದು ಕೇಳಿದಳು. ಸಾರಿ ಇವತ್ತು ಆಗಲ್ಲ. ಚೀಫ್ ಇನ್ನೂ ಆಫೀಸಿಗೆ ಬಂದಿಲ್ಲ. ಬರ್ತಾರೋ ಇಲ್ಲವೋ ಗೊತ್ತಿಲ್ಲ. ನನ್ನ ಕೆಲಸ ಮುಗಿಯೋಕೆ ತಡವಾಗುತ್ತೆ. ಇನ್ನೊಂದಿನ ಹೋಗೋಣ ಅಂದ. ಅವಳು ಏನೂ ಹೇಳಲಿಲ್ಲ. ಹೋಗ್ಲಿ ಬಿಡು ಅನ್ನುತ್ತ ಹನ್ನೊಂದು ಗಂಟೆ ಮೇಲೆ ನಿಂಗೆ ಫೋನ್ ಮಾಡ್ತೀನಿ. ನಿಂಗೇನೊ ಹೇಳಬೇಕು ಎಂದು ಹೇಳಿ ಫೋನ್ ಆಫ್ ಮಾಡಿಕೊಂಡಳು.

* * *

ರಾತ್ರಿ ಒಂದೂವರೆ ಹೊತ್ತಲ್ಲಿ ಅರುಂಧತಿಯ ಫೋನ್ ಬಂತು. 'ಎಲ್ಲಿದ್ದೀಯಾ? ತುಂಬಾ ಹೊತ್ತಿಂದ ನಿಂಗೆ ಟ್ರೈ ಮಾಡ್ತಲೇ ಇದ್ದೀನಿ. ನಿನ್ನ ಫೋನು ಔಟಾಫ್ ಕವರೇಜ್ ಏರಿಯಾದಲ್ಲಿದೆ ಅಂತ ಬರ್ತಿದೆ. ಎಲ್ಲಿದ್ದೀಯಾ? ಆರ್ ಯೂ ಓಕೆ' ಎಂದು ಆತಂಕದಲ್ಲಿ ಕೇಳಿದಳು.

'ಇಷ್ಟೊತ್ತು ಅಪಾರ್ಟ್‌ಮೆಂಟ್‌ನ ಪಾರ್ಕಿಂಗ್ ಏರಿಯಾದಲ್ಲಿ ಕಾರಲ್ಲಿ ಕೂತಿದ್ದೆ. ನಾನು ಆಫೀಸಿಂದ ಹೊರಡುವಾಗ ಶುರುವಾದ ಮಳೆ ಇನ್ನೂ ಬಿಟ್ಟಿಲ್ಲ. ಎಂಥಾ ಮಳೆ ಅಂತೀಯಾ. ಪ್ಯಾಲೇಸ್ ರೋಡಲ್ಲಿ ಮರ ಬಿದ್ದು ಎರಡು ಗಂಟೆ ರೋಡ್ ಬ್ಲಾಕ್ ಆಗಿತ್ತು. ಸದ್ಯ,ಇವತ್ತು ಕಾರಲ್ಲಿ ಬಂದಿದ್ದರಿಂದ ಮಳೆಯಲ್ಲಿ ನೆನೆಯೋದು ತಪ್ಪಿತು. ನಮ್ಮ ಅಪಾರ್ಟ್‌ಮೆಂಟಲ್ಲಿ ಕರೆಂಟಿಲ್ಲ. ಲಿಫ್ಟ್ ವರ್ಕ್ ಆಗ್ತಿಲ್ಲ. ಎಂಟನೇ ಫ್ಲೋರಿಗೆ ಹತ್ತಿಕೊಂಡು ಹೋಗಬೇಕು ಅಂತ ರೆಡಿಯಾಗ್ತಿದ್ದೆ. ಅಷ್ಟರಲ್ಲಿ ನಿನ್ನ ಫೋನ್ ಬಂತು. ಸ್ವಲ್ಪಹೊತ್ತು ಬಿಟ್ಟು ನಾನೇ ಮಾಡ್ತೀನಿ' ಎಂದು ಹೇಳಿ ಫೋನ್ ಕಟ್ ಮಾಡಿಕೊಂಡ.

ಅರ್ಧಗಂಟೆ ಕಳೆದ ಮೇಲೆ ಮತ್ತೆ ಅವಳೇ ಫೋನ್ ಮಾಡಿದಳು. 'ಇಲ್ಲಿಯೂ ಮಳೆ ಬರ್ತಿದೆ. ಡಿನ್ನರ್‌ಗೆ ಹೋಗಿದ್ರೆ ಮಳೆಗೆ ಸಿಕ್ಕಿಕೊಳ್ತಿದ್ವಿ' ಅನ್ನುತ್ತ ಮಾತು ಶುರು ಮಾಡಿದಳು. ಮತ್ತೆ ಅಭಿಯ ವಿಚಾರ ಎತ್ತಿದಳು. 'ಸಂಜೆ ಇನ್ನೊಂದು ಮೆಸೇಜ್ ಕಳಿಸಿದ್ದ. ನಾಳೆಯೂ ಮೀಟಿಂಗ್ ಇದೆ ನಾಡಿದ್ದು ಬರ್ತೀನಿ ಅಂತ. ಅವನು ಸುಳ್ಳು ಹೇಳ್ತಿದ್ದಾನೆ. ಅವನನ್ನು ನೆನಪು ಮಾಡಿಕೊಳ್ಳೋಕೂ ನಂಗೆ ಇಷ್ಟವಿಲ್ಲ' ಎನ್ನುತ್ತ 'ಹೋಗ್ಲಿ ಬಿಡು, ಇವತ್ತು ಏನು ಮಾಡೋಕೂ ಮೂಡ್ ಇರಲಿಲ್ಲ. ಬೆಳಿಗ್ಗೆ ನಿಂಗೆ ಫೋನ್ ಮಾಡಿದ ಮೇಲೆ ಒಂದು ಸ್ಲೀಪಿಂಗ್ ಮಾತ್ರೆ ನುಂಗಿ ಮಲಗಿದೆ. ಆರು ಗಂಟೆವರೆಗೆ ಸಖತ್ ನಿದ್ದೆ ಮಾಡಿದೆ. ಈಗ ನಿದ್ದೇನೇ ಬರ್ತಿಲ್ಲ. ನಿನ್ನ ಜತೆ ಮಾತಾಡಬೇಕು ಅನ್ನಿಸ್ತು. ಹ್ಞಾ, ನಿಂಗೊಂದು ವಿಷಯ ಹೇಳಬೇಕು. ಅದನ್ನು ನಾನು ಅಭಿಗೂ ಹೇಳಿಲ್ಲ' ಎಂದಳು.

'ನಾನು ನ್ಯಾಷನಲೈಸ್ಡ್ ಬ್ಯಾಂಕ್‌ಗೆ ಸೇರಿಕೊಳ್ಳೋಕೆ ಮುಂಚೆ ಹೈದರಾಬಾದ್‌ನಲ್ಲಿ ಒಂದು ಪ್ರೈವೇಟ್ ಬ್ಯಾಂಕಿನಲ್ಲಿ ಎರಡು ವರ್ಷ ಕೆಲಸ ಮಾಡಿದ್ದೆ. ಅದೇ ಬ್ಯಾಂಕಲ್ಲಿ ಗುಂಟೂರು ಕಡೆಯ ಶಿವಪ್ರಸಾದ್ ಅನ್ನೋ ಕಲೀಗ್ ಇದ್ದ. ಅವನೇ ನಂಗೆ ಅಲ್ಲಿ ಒಳ್ಳೆಯ ಪೀಜಿಯನ್ನು ಹುಡುಕಿ ಕೊಟ್ಟಿದ್ದ. ಒಳ್ಳೆಯವನಂತೆ ಕಾಣ್ತಿದ್ದ. ನೋಡೋಕೆ ಚೆನ್ನಾಗಿದ್ದ. ಅವನ ಜತೆ ಸ್ವಲ್ಪ ಫ್ರೀಯಾಗೇ ಮಾತಾಡ್ತಿದ್ದೆ. ಲಂಚ್ ಅವರ್‌ನಲ್ಲಿ ಕ್ಯಾಂಟೀನ್‌ನಲ್ಲಿ ಒಟ್ಟಿಗೆ ಊಟ ಮಾಡ್ತಿದ್ವಿ...

ನಾನು ತುಂಬಾ ಬಡತನದಿಂದ ಬಂದಿದ್ದೀನಿ ಅಂತ ಅವನು ಯಾವಾಗಲೂ ಹೇಳ್ತಿದ್ದ. ಅವನಿಗೆ ಸಿನಿಮಾಕ್ಕೆ ಸೇರೋ ಹುಚ್ಚಿತ್ತು. ಒಂದು ದಿನ ಊರಲ್ಲಿರೋ ಮನೆ ಹರಾಜಿಗೆ ಬಂದಿದೆ. ಬ್ಯಾಂಕಿನಲ್ಲಿ ಐದು ಲಕ್ಷ ಸಾಲ ತಗೋತಿದ್ದೀನಿ. ಷ್ಯೂರಿಟಿ ಹಾಕಿ ಮೇಡಂ ಅಂತ ಕೇಳಿದ. ಒಳ್ಳೆಯ ಉದ್ದೇಶಕ್ಕೆ ಸಾಲ ತಗೋತಿದ್ದಾನೆ ಅನ್ನಿಸಿ ಹಾಕಿದ್ದೆ. ಆಮೇಲೆ ಮನೆ ಬಿಡಿಸಿಕೊಂಡ. ಆರು ತಿಂಗಳು ಸಾಲದ ಕಂತು ಕಟ್ಟಿದ. ಕೆಲವು ದಿನಗಳಾದ ಮೇಲೆ ನಂಗೆ ಪ್ರಪೋಸ್ ಮಾಡಿದ. ನಾನು ಅಪ್ಪ ಅಮ್ಮನ್ನ ಕೇಳಬೇಕು ಅಂತಷ್ಟೇ ಹೇಳಿದ್ದೆ. ಆಮೇಲೆ ಅವನು ಮತ್ತೆಂದೂ ಆ ವಿಷಯ ಎತ್ತಲಿಲ್ಲ. ಒಂದಿನ ಊರಿಂದ ಅಮ್ಮ ಬಂದಿದ್ದಾರೆ, ಮನೆಗೆ ಬನ್ನಿ ಪರಿಚಯ ಮಾಡಿಕೊಡ್ತೀನಿ ಅಂದ. ಅವನ ಜತೆ ಹೋದೆ. ಮನೆಯಲ್ಲಿ ಅವನಮ್ಮ ಇರಲಿಲ್ಲ! ನಿಮ್ಮಮ್ಮ ಎಲ್ಲಿ ಅಂತ ಕೇಳಿದರೆ ಅವನು ಸುಮ್ಮನೆ ನಕ್ಕ. ಇಂಥದ್ದೆಲ್ಲ ನಂಗೆ ಇಷ್ಟ ಆಗಲ್ಲ ಅಂತ ಹೇಳಿ ಅಲ್ಲಿಂದ ಬಂದು ಬಿಟ್ಟೆ. ಆಮೇಲೆ ಅವನ ಜತೆ ಮಾತಾಡೋದನ್ನು ಕಡಿಮೆ ಮಾಡಿದೆ. ಒಂದಿನ ಇದ್ದಕ್ಕಿದ್ದ ಹಾಗೆ ಅವನು ಕೆಲಸ ಬಿಟ್ಟ. ಕೆಲವು ದಿನಗಳಾದ ಮೇಲೆ ಅವನು ಸಿನಿಮಾ ಸೇರಿಕೊಂಡ ಅಂತ ಯಾರೋ ಹೇಳಿದರು. ಆರು ತಿಂಗಳು ಕಳೆದ ಮೇಲೆ ಅವನಿಗೆ ಸಾಲ ಕೊಟ್ಟ ಬ್ಯಾಂಕಿನವರು ನಂಗೆ ನೋಟೀಸ್ ಕಳಿಸಿದರು. ಅವನು ಎಲ್ಲಿದ್ದಾನೆ ಅನ್ನೋದನ್ನು ಪತ್ತೆ ಮಾಡೋಕೆ